ಕರ್ನಾಟಕ ಸರ್ಕಾರ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ:ಬಿಟಿಇ/06/ಇಸಿಎಸ್(1)/2024

ಆಯುಕ್ತರವರ ಕಛೇರಿ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಅರಮನೆ ರಸ್ತೆ, ಬೆಂಗಳೂರು-560001
ದಿನಾಂಕ:08.11.2024

## ಜ್ಞಾಪನ

ವಿಷಯ: ನವೆಂಬರ್/ಡಿಸೆಂಬರ್ 2024ರ ಡಿಪ್ಲೋಮ ಸೆಮಿಸ್ಟರ್ ಥಿಯರಿ ಪರೀಕ್ಷೆಗೆ ಪ್ರಶ್ನೆಪತ್ರಿಕೆಗಳನ್ನು ಆನ್ ಲೈನ್ ನಲ್ಲಿ ಪರಿಶೀಲಿಸಿ ದೃಢೀಕರಿಸುವ ಬಗ್ಗೆ.

ಉಲ್ಲೇಖ: 1) ಈ ಕಛೇರಿ ಸುತ್ತೋಲೆ:DTE-ADMIOACM2/45/2024 ದಿ:19.10.2023

2) ಈ ಕಛೇರಿ ಜ್ಞಾಪನ ಸಂಖ್ಯೆ:ಬಿಟಿಇ/06/ಇಸಿಎಸ್(1)/2024 ದಿ:12.09.2024

*************

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖದ ಈ ಕಛೇರಿ ಸುತ್ತೋಲೆಯನ್ವಯ ನವೆಂಬರ್/ ಡಿಸೆಂಬರ್ 2024 ರ ಡಿಪ್ಲೋಮ ಸೆಮಿಸ್ಟರ್ ಥಿಯರಿ ಪರೀಕ್ಷೆಗಳನ್ನು ನಿಗದಿತ ವೇಳಾಪಟ್ಟಿಯಂತೆ ನಡೆಸಲು ಕ್ರಮಕೈಗೊಳ್ಳಲಾಗಿದೆ.

ಉಲ್ಲೇಖ (2) ರ ಈ ಕಛೇರಿ ಜ್ಞಾಪನದನ್ವಯ C-15 & C-20 ಪಠ್ಯಕ್ರಮಗಳ ಥಿಯರಿ ವಿಷಯಗಳಿಗೆ ಪ್ರಶ್ನೆ ಪತ್ರಿಕೆಗಳನ್ನು ರಚಿಸಲು ಉಪನ್ಯಾಸಕರುಗಳಿಗೆ/ ಪ್ರಶ್ನೆಪತ್ರಿಕೆ ರಚನಕಾರರುಗಳಿಗೆ ಆದೇಶಗಳನ್ನು ಕಳುಹಿಸಿಕೊಡಲಾಗಿದೆ. ಪ್ರಶ್ನೆ ಪತ್ರಿಕೆ ರಚನಕಾರರುಗಳು ಪ್ರಶ್ನೆ ಪತ್ರಿಕೆಗಳನ್ನು ನಿಗದಿತ ಪಠ್ಯಕ್ರಮ ಮತ್ತು ಸ್ಕೀಮ್ ಆಫ್ ಸ್ಟಡೀಸ್ ಗೆ ಅನುಗುಣವಾಗಿ, ಪಠ್ಯಕ್ರಮದಲ್ಲಿ ನೀಡಿರುವ ಮಾರ್ಗಸೂಚಿಗಳ ಅನ್ವಯ ಕಡ್ಡಾಯವಾಗಿ MS WORD ನಲ್ಲಿ SOFT COPY ಯನ್ನು ಸಿದ್ಧಪಡಿಸಿಕೊಂಡು, ಸಂಬಂಧಿಸಿದ ಪರೀಕ್ಷಕರ ಸಮಿತಿಯ ಅಧ್ಯಕ್ಷರು ಮತ್ತು ಟೆಲಿಗ್ರಾಂ ಗ್ರೂಪ್ BTE Exam Nov 2024 QP ನಲ್ಲಿ ಕಾಲಕಾಲಕ್ಕೆ ನೀಡುವ ಸೂಚನೆಗಳಂತೆ ಸಮನ್ವತೆಯಿಂದ ನಿಗದಿತ ಸಮಯದಲ್ಲಿ ಬಿಟಿಇ ಲಿಂಕ್ಸ್ ವೆಬ್ ಪೋರ್ಟಲ್ ಮೂಲಕ ಅಪ್ ಲೋಡ್ ಮಾಡಲು ಪ್ರಶ್ನೆಪತ್ರಿಕೆ ರಚನಾಕಾರರಿಗೆ ಸೂಚಿಸಲಾಗಿದೆ.

ಮುಂದುವರೆದು ಆಯಾ ಪರೀಕ್ಷಕರ ಸಮಿತಿಯ ಅಧ್ಯಕ್ಷರು/ಸದಸ್ಯರು ಆಯಾ ವಿಭಾಗಕ್ಕೆ ಸಂಬಂಧಿಸಿದ ಪ್ರಶ್ನೆ ಪತ್ರಿಕೆ ರಚನಕಾರರುಗಳನ್ನು ಸಂಪರ್ಕಿಸಿ, ಪ್ರಶ್ನೆ ಪತ್ರಿಕೆಗಳನ್ನು MS WORD ನಲ್ಲಿ SOFT COPY ಯನ್ನು ಸಿದ್ಧಪಡಿಸಿಟ್ಟುಕೊಂಡು ಬಿಟಿಇಲಿಂಕ್ಸ್ ವೆಬ್ ಪೋರ್ಟಲ್ ನಲ್ಲಿ ಅವಕಾಶ ಕಲ್ಪಿಸಿದಾಗ ಅಪ್ ಲೋಡ್ ಮಾಡಲು ತಿಳಿಸುವುದು ಮತ್ತು ತಮ್ಮ ವಿಭಾಗಗಳಿಗೆ ಸಂಬಂಧಿಸಿದ ವಿವಿಧ ಪ್ರಶ್ನೆಪತ್ರಿಕೆಗಳನ್ನು Online ನಲ್ಲಿಯೇ ತೆರೆದು ಪಠ್ಯಕ್ರಮ/ ಸ್ಕೀಂ ಆಫ್ ಸ್ಟಡೀಸ್ ಪ್ರಶ್ನೆಪತ್ರಿಕೆ ರಚನಾಕಾರರಿಗೆ ನೀಡಿರುವ ಸೂಚನೆಗಳನ್ವಯ ಪ್ರಶ್ನೆಪತ್ರಿಕೆಗಳನ್ನು ರಚಿಸಿರುವುದನ್ನು ಖಾತರಿಪಡಿಸಿಕೊಂಡು, ಪರಿಶೀಲಿಸಿ ಮತ್ತು ತಪ್ಪುಗಳನ್ನು ಸರಿಪಡಿಸಿ ಇಂದೀಕರಿಸುವ ಮೂಲಕ ಪ್ರಶ್ನೆಪತ್ರಿಕೆ ದೃಢೀಕರಿಸಲು ಸೂಚಿಸಲಾಗಿದೆ.

ಪ್ರಶ್ನೆಪತ್ರಿಕೆಯ ರಚನೆ/ ಪರಿಶೀಲನೆ ಕಾರ್ಯಗಳನ್ನು ಅತ್ಯಂತ ಜಾಗ್ರತೆ, ಪಾವಿತ್ರ್ಯತೆ ಹಾಗೂ ಗೌಪ್ಯತೆಯಿಂದ ನಿರ್ವಹಿಸಲು ಮತ್ತು ಈ ವಿಷಯದಲ್ಲಿ ಯಾವುದೇ ಅಜಾಗರೂಕತೆ/ ಲೋಪದೋಷ/ ತಪ್ಪುಗಳು ಉಂಟಾಗದಂತೆ ಎಚ್ಚರವಹಿಸಿ ಕ್ರಮಕೈಗೊಳ್ಳುವಂತೆ ತಿಳಿಸಲಾಗಿದೆ.

ಕಾರ್ಯದರ್ಶಿ

ಇವರಿಗೆ,
1.ಎಲ್ಲಾ ಪರೀಕ್ಷಕರ ಸಮಿತಿಗಳ ಅಧ್ಯಕ್ಷರು/ಸದಸ್ಯರುಗಳು - ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ
2. ಪ್ರಶ್ನೆಪತ್ರಿಕೆ ರಚನಾಕಾರರು - ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ

ಪ್ರತಿ: 1. ಶ್ರೀ ಹರೀಶ ಶೆಟ್ಟಿ, ಪ್ರಾಂಶುಪಾಲರು, ಕರ್ನಾಟಕ ಸರ್ಕಾರಿ ಪಾಲಿಟೆಕ್ನಿಕ್, ಮಂಗಳೂರು- ಮಾಹಿತಿ & ಅಗತ್ಯ ಪೂರ್ವಸಿದ್ಧತೆಗಾಗಿ

2.ಇ-ಗವರ್ನೆನ್ಸ್ ವಿಭಾಗ – ವೆಬ್ ಸೈಟ್ ನಲ್ಲಿ ಪ್ರಕಟಿಸಲು
3. ಗಣಕ ಕೇಂದ್ರ – ಬಿಟಿಇಲಿಂಕ್ಸ್ ವೆಬ್ ಪೋರ್ಟಲ್ ನಲ್ಲಿ ಪ್ರಕಟಿಸಲು ಮತ್ತು ಅಗತ್ಯಕ್ರಮಕ್ಕಾಗಿ
4. ಆಯುಕ್ತರ ಆಪ್ತಶಾಖೆ -ಅವಗಾಹನೆಗಾಗಿ
5. ನಿರ್ದೇಶಕರ ಆಪ್ತಶಾಖೆ -ಅವಗಾಹನೆಗಾಗಿ
6.ಇಎಪಿ ವಿಭಾಗ -ಮಾಹಿತಿಗಾಗಿ